# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **1527 (1717)** |
| **ಸದಸ್ಯರ ಹೆಸರು** | **ಶ್ರೀ ಬಸನಗೌಡ ಬಾದರ್ಲಿ** |
| **ಉತ್ತರಿಸಬೇಕಾದ ದಿನಾಂಕ** | **23-03-2026** |
| **ಉತ್ತರಿಸುವವರು** | **ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರು ತಾಲ್ಲೂಕಿಗೆ ಅರಣ್ಯ ಇಲಾಖೆಯಿಂದ ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು; | ಅರಣ್ಯ ಇಲಾಖೆಯ ಕಲಬುರಗಿ ವೃತ್ತ ವ್ಯಾಪ್ತಿಯ ರಾಯಚೂರು ವಿಭಾಗಕ್ಕೆ ಸೇರಿದ ಸಿಂಧನೂರು ತಾಲ್ಲೂಕಿಗೆ ಮಂಜೂರಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ (ಜಿಲ್ಲಾ ಪಂಚಾಯತ್ ಅಧೀನದಲ್ಲಿರುವ ಸಾಮಾಜಿಕ ಅರಣ್ಯ ವಿಭಾಗದ ಹುದ್ದೆಗಳು ಸೇರಿದಂತೆ) ವಿವರಗಳನ್ನು ***ಅನುಬಂಧ***ದಲ್ಲಿ ಲಗತ್ತಿಸಿದೆ. |
| ಆ) | ತಾಲ್ಲೂಕಿನ ಅರಣ್ಯ ಇಲಾಖೆ ಕಚೇರಿಗಳಲ್ಲಿ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು; (ಪೂರ್ಣ ಮಾಹಿತಿ ನೀಡುವುದು) | |
| ಇ) | ಯಾವ ಕಾಲಮಿತಿಯೊಳಗೆ ಸದರಿ ಹುದ್ದೆಗಳನ್ನು ಸರ್ಕಾರದಿಂದ ಭರ್ತಿ ಮಾಡಲಾಗುತ್ತದೆ? | • ಅರಣ್ಯ ಇಲಾಖೆಯಲ್ಲಿ ವೃಂದವಾರು ಗ್ರೂಪ್ 'ಎ', 'ಬಿ', 'ಸಿ' ಮತ್ತು 'ಡಿ'ಗೆ ಸೇರಿದ ಹುದ್ದೆಗಳನ್ನು ನೇರನೇಮಕಾತಿ (DR) ಕೋಟಾ ಹಾಗೂ ಮುಂಬಡ್ತಿ (PR) ಕೋಟಾದಡಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.<br>• ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಕಾಲಮಿತಿಯ ವಿವರ ಈ ಕೆಳಕಂಡಂತಿದೆ.<br>○ **ಗ್ರೂಪ್ 'ಬಿ'** ಗೆ ಸೇರಿದ ಅರಣ್ಯ ಇಲಾಖೆಯ ಕಾರ್ಯಕಾರಿ ವೃಂದಗಳಾದ ವಲಯ ಅರಣ್ಯಾಧಿಕಾರಿ, **ಗ್ರೂಪ್ 'ಸಿ'** ಗೆ ಸೇರಿದ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ, ಗಸ್ತು ಅರಣ್ಯ ಪಾಲಕ, ಹಾಗೂ **ಗ್ರೂಪ್ 'ಡಿ'** ಗೆ ಸೇರಿದ ಅರಣ್ಯ ವೀಕ್ಷಕರ ಮತ್ತು ಆನೆ ಕಾವಾಡಿಗ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆಗಳನ್ನು ಆರ್ಥಿಕ ಇಲಾಖೆಯ ಸಹಮತಿಗಾಗಿ ಸಲ್ಲಿಸಲಾಗಿದ್ದು, ಅನುಮೋದನೆ ದೊರೆತ ನಂತರ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು.<br>○ **ಗ್ರೂಪ್ 'ಸಿ'** ಗೆ ಸೇರಿದ ಲಿಪಿಕ ವರ್ಗದ ಪ್ರಥಮ ದರ್ಜೆ ಸಹಾಯಕ, ದ್ವಿತೀಯ ದರ್ಜೆ ಸಹಾಯಕ |

| | | |
|---|---|---|
| | | ವೃಂದ, ಶೀಘ್ರಲಿಪಿಗಾರ ಹಾಗೂ ಬೆರಳಚ್ಚುಗಾರ ವೃಂದದ ನೇರನೇಮಕಾತಿ (DR) ಕೋಟಾದ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಅನುಮೋದನೆ ದೊರೆತ ನಂತರ ಭರ್ತಿ ಮಾಡಲು ಕ್ರಮವಹಿಸಲಾಗುವುದು |

**ಸಂಖ್ಯೆ: ಎಫ್‌ಇಇ 106 ಎಫ್‌ಎನ್‌ಜಿ 2026**

**(ಈಶ್ವರ ಬಿ. ಖಂಡ್ರೆ)**
**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.**

## ಅನುಬಂಧ

**ಅರಣ್ಯ ಇಲಾಖೆಯ ಕಲಬುರಗಿ ವೃತ್ತದ ಸಿಂಧನೂರು ತಾಲ್ಲೂಕಿಗೆ ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ**

| ಗ್ರೂಪ್ | ಕ್ರ. ಸಂ. | ವಿಭಾಗ/ವಲಯದ ಹೆಸರು | ವೃಂದ/ ಪದನಾಮ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿಯಿರುವ ಹುದ್ದೆಗಳು |
|---|---|---|---|---|---|---|
| ಗ್ರೂಪ್ 'ಬಿ' | 1 | ಸಾಮಾಜಿಕ ಅರಣ್ಯ ವಲಯ, ಸಿಂಧನೂರು | ವಲಯ ಅರಣ್ಯಾಧಿಕಾರಿ | 1 | 0 | 1 |
| ಗ್ರೂಪ್ 'ಸಿ' | 2 | | ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ | 2 | 2 | 0 |
| | 3 | | ಗಸ್ತು ಅರಣ್ಯ ಪಾಲಕ | 3 | 1 | 2 |
| | 4 | | ಪ್ರಥಮ ದರ್ಜೆ ಸಹಾಯಕ | 1 | 0 | 1 |
| ಗ್ರೂಪ್ 'ಸಿ' | 5 | ಮಾನವಿ ಪ್ರಾದೇಶಿಕ ವಿಭಾಗದ ಸಿಂಧನೂರು ತಾಲ್ಲೂಕು | ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ | 1 | 1 | 0 |
| | 6 | | ಗಸ್ತು ಅರಣ್ಯ ಪಾಲಕ | 2 | 1 | 1 |
| **ಒಟ್ಟು** | | | | **10** | **5** | **5** |

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಸಿಬ್ಬಂದಿ ಮತ್ತು ನೇಮಕಾತಿ)